ದಿನಾಂಕ 24-10-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಎ ಕೆ ಪಿ ವಕೀಲರಿಂದಃ**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿರುತ್ತೇನೆ. ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದನ್ನು ನಾನು ನೀಡಿರುವ ಮಾಹಿತಿ ಮೇರೆಗೆ ತಯಾರಿಸಿದ್ದು, ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಸತ್ಯವಾಗಿರುತ್ತದೆ ಎಂದು ಪ್ರಮಾಣಿಕರಿಸುತ್ತೇನೆ.

ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ಮಾಹಿತಿಯ ಯಥಾಪ್ರತಿ |
| ನಿಪಿ-2 | ಪ್ರಥಮ ವರ್ತಮಾನ ವರದಿಯ ಯಥಾ ಪ್ರತಿ |
| ನಿಪಿ-3 | ಸ್ಥಳ ಪಂಚನಾಮೆಯ ಯಥಾಪ್ರತಿ |
| ನಿಪಿ-4 | ಕಚ್ಚಾ ನಕ್ಷೆಯ ಯಥಾಪ್ರತಿ |
| ನಿಪಿ-5 | ಐ ಎಂ ವಿ ವರದಿಯ ಯಥಾ ಪ್ರತಿ |
| ನಿಪಿ-6 | ಗಾಯದ ಪ್ರಮಾಣ ಪತ್ರದ ಯಥಾ ಪ್ರತಿ |
| ನಿಪಿ-7 | ವೈದ್ಯಕೀಯ ಬಿಲ್ಲುಗಳು (ಒಟ್ಟು 122) |
| ನಿಪಿ-8 | ದಿನಾಂಕ 03-05-2024 ರ ಒಳರೋಗಿ ಬಿಲ್ಲು |

| | |
|---|---|
| ನಿಪಿ-9 | ದಿನಾಂಕ 16-05-2024 ರ ಒಳರೋಗಿ ಬಿಲ್ಲು |
| ನಿಪಿ-10 | ದಿನಾಂಕ 08-06-2024 ರ ಒಳರೋಗಿ ಬಿಲ್ಲು ಕಮ್ ರಶೀದಿ |
| ನಿಪಿ-11 | ದಿನಾಂಕ 05-05-2024 ರ ಆಸ್ಪತ್ರೆ ಬಿಡುಗಡೆ ಪತ್ರ |
| ನಿಪಿ-12 | ದಿನಾಂಕ 15-06-2024 ರ ಆಸ್ಪತ್ರೆ ಬಿಡುಗಡೆ ಪತ್ರ |
| ನಿಪಿ-13 | ದಿನಾಂಕ 08-06-2024 ರ ಆಸ್ಪತ್ರೆ ಬಿಡುಗಡೆ ಪತ್ರ |
| ನಿಪಿ-14 | ಚಿಕಿತ್ಸಾ ಪ್ರಮಾಣ ಪತ್ರ |
| ನಿಪಿ-15 | ಅಂಗನ್ಯೂನ್ಯತಾ ಪ್ರಮಾಣ ಪತ್ರ. |
| ನಿಪಿ-16 | ಪ್ರಯೋಗಾಲಯದ ವರದಿ |
| ನಿಪಿ-17 | ಪ್ರಯೋಗಾಲಯದ ವರದಿ |
| ನಿಪಿ-18 | ಪ್ರಯೋಗಾಲಯದ ವರದಿ |
| ನಿಪಿ-19 | ಮುಂಗಡ ರಶೀದಿ |
| ನಿಪಿ-20 | ಔಷಧ ಸಲಹಾ ಚೀಟಿಗಳು (ಒಟ್ಟು 64) |
| ನಿಪಿ-21 | 2 ಭಾವ ಚಿತ್ರಗಳು |
| ನಿಪಿ-22 | ಸಾಧನಾ ಡಿಜಿಟಲ್ ರವರು ನೀಡಿದ ರಶೀದಿ |
| ನಿಪಿ-23 | ನೋಟರಿಯವರಿಂದ ದೃಢೀಕರಿಸಲಾದ ಆಧಾರ ಕಾರ್ಡ್ |
| ನಿಪಿ-24 | ನೋಟರಿಯವರಿಂದ ದೃಢೀಕರಿಸಲಾದ ಪಾನ್ ಕಾರ್ಡ್ |

ನಿಪಿ -14 ಮತ್ತು 15 ದಾಖಲೆಗಳನ್ನು 2 ನೇ ಅರ್ಜಿದಾರರ ಪರ ಗೌರವಾನ್ವಿತ ವಕೀಲರ ತಕಾರಾರರಿಗೆ ಒಳಪಟ್ಟು ಮತ್ತು ರುಜುವಾತು ಪಡಿಸುವ ಷರತ್ತಿಗೆ ಒಳಪಟ್ಟು ಗುರುತಿಸಲಾಗಿದೆ.

ನಿಪಿ 23 ಮತ್ತು 24 ಎಂದು ಗುರುತಿಸಿರುವ ಆಧಾರ ಕಾರ್ಡ್ ಮತ್ತು ಪಾನ್ ಕಾರ್ಡ್‌ಗಳ ಮೂಲ ಪ್ರತಿಗಳನ್ನು ಪಡೆದು ಪರಿಶೀಲೀಸಿ, ಮೂಲ ಆಧಾರ ಕಾರ್ಡ್ ಮತ್ತು ಪಾನ್ ಕಾರ್ಡ್ ಅರ್ಜಿದಾರರಿಗೆ ಹಿಂತಿರುಗಿಸಲಾಗಿದೆ.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರರುದಾರರ ಪರವಾಗಿ ಶ್ರೀ ಡಿ ಬಿ ಎಸ್ ವಕೀಲರಿಂದ ಃ**

ಅಪಘಾತವಾಗಿದೆ ಎಂದು ಹೇಳುವ ದಿನ ನೀವು ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದೀರಾ ಎಂದರೆ ಹೌದು. ದ್ವಿ ಚಕ್ರ ವಾಹನವು ನಿಮಗೆ ಸಂಬಂಧ ಪಟ್ಟಿದ್ದೆ ಎಂದರೆ ಅದು ನನ್ನ ತಂಗಿಗೆ ಸೇರಿದ್ದಾಗಿತ್ತು . ನಿಮಗೆ ದ್ವಿ ಚಕ್ರ ವಾಹನ ಚಾಲನೆ ಮಾಡಲು ಡಿ ಎಲ್ ಇರುವುದಿಲ್ಲ ಎಂದರೆ ಇರುವುದಿಲ್ಲ. ದ್ವಿ ಚಕ್ರ ವಾಹನವನ್ನು ಕಲಿಯುವ ಹಂತದಲ್ಲಿ ನೀವು ಇದ್ದೀರಿ ಎಂದರೆ ನನಗೆ ಚಾಲನೆ ಮಾಡಲು ಬರುತ್ತಿತ್ತು. ಆ ದಿನ ನಿಮ್ಮ ಜೊತೆಯಲ್ಲಿ ಯಾರಾದರು ಇದ್ದರೆ ಎಂದರೆ ಇಲ್ಲ. ನೀವು ಕರಾವಳಿ ಜಂಕ್ಷನ್ ನಿಂದ ಸಂತೆಕಟ್ಟೆಗೆ ಕಡೆಗೆ ಹೋಗುವವರು ಇದ್ದಿರಿ ಎಂದರೆ ಹೌದು. ಅಪಘಾತವಾಗಿದೆ ಎಂದು ಹೇಳುವ ಸಮಯದಲ್ಲಿ ನಿಮ್ಮ ವಾಹನದ ಎದರು ನಾಯಿಯು ಅಡ್ಡ ಬಂದಿರುತ್ತದೆಯೇ ಎಂದರೆ ಇಲ್ಲ. ಅಪಘಾತವು ರಾಷ್ಟಿಯ ಹೆದ್ದಾರಿಯಲ್ಲಿ ಆಗಿರುತ್ತದೆ ಅಲ್ಲವೇ ಎಂದರೆ ಹೌದು. ನೀವು ಹೋಗುತ್ತಿದ್ದ ರಸ್ತೆಯ ಪೂರ್ವ ಬದಿಯಲ್ಲಿ ರಸ್ತೆ ವಿಭಜಕ ಇತ್ತು ಅಲ್ಲವೇ ಎಂದರೆ ಹೌದು.

ರಸ್ತೆ ವಿಭಜಕದಿಂದ ಪಶ್ಚಿಮಕ್ಕೆ ಸುಮಾರು 10 ಅಡಿ ದೂರದಲ್ಲಿ ಅಪಘಾತವಾಗಿರುವುದು ಅಲ್ಲವೇ ಎಂದರೆ ರಸ್ತೆಯ ಪಶ್ಚಿಮ ಬದಿಯಲ್ಲಿ ಆಗಿರುತ್ತದೆ. ಕಾರನ್ನು ನೀವು ಗಮನಿಸಿರುತ್ತೀರಾ ಎಂದರೆ ಹೌದು. ಬಾಳಿಗ ಫಿಶ್ ನೆಟ್ ನಿಂದ ನಿಟ್ಟೂರು ಅಡ್ಡ ರಸ್ತೆಯು ಸುಮಾರು 500 ರಿಂದ 600 ಮೀ ಅಂತರದಲ್ಲಿ ಇದೆ ಅಂದರೆ ಹೌದು. ನೀವು ಕಾರನ್ನು ಎಷ್ಟು

ಅಂತರದಿಂದ ಗಮನಿಸಿದ್ದೀರಿ ಎಂದರೆ ಸುಮರು 30 ಮೀ ಅಂತರದಿಂದ ಗಮನಿಸಿರುತ್ತೇನೆ. ನೀವು ಕಾರನ್ನು ದ್ವಿಚಕ್ರ ವಾಹನದ ಕನ್ನಡಿಯಿಂದ ನೋಡಿರುತ್ತಿರಾ ಅಥವಾ ತಲೆಯನ್ನು ಹಿಂದಿರುಗಿಸಿ ನೋಡಿರುತ್ತೀರಾ ಎಂದರೆ ದ್ವಿಚಕ್ರ ವಾಹನದ ಕನ್ನಡಿಯಿಂದ ನೋಡಿರುತ್ತೇನೆ. ಕಾರು ಎಷ್ಟು ವೇಗದಲ್ಲಿ ಇತ್ತು ಎಂದರೆ ಸುಮಾರು 100 ರಿಂದ 120 ಕಿಲೋ ಮೀ ವೇಗದಲ್ಲಿ ಇತ್ತು. ನಿಮ್ಮ ವಾಹನದ ವೇಗ ಎಷ್ಟು ಇತ್ತು ಅಂದರೆ 40 ಕಿಲೋ ಮೀ ವೇಗದಲ್ಲಿ ಇದ್ದೇನು. ರಾಷ್ಟ್ರಿಯ ಹೆದ್ದಾರಿಯಲ್ಲಿ ವಾಹನಗಳು ವೇಗವಾಗಿ ಹೋಗುತ್ತವೆ ಎಂದರೆ ಹೌದು. ನಿಮಗೆ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಬರುತ್ತಿರಲಿಲ್ಲ, ಗಡಿಬಿಡಿಯಲ್ಲಿ ಎಕಾಎಕಿಯಾಗಿ ಬ್ರೇಕ್ ನ್ನು ಹಾಕಿರುತ್ತಿರಿ ಎಂದರೆ ಸರಿಯಲ್ಲ.

ನೀವು ಏನು ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಕೂಲಿ ಕೆಲಸವನ್ನು ಮಾಡುತ್ತಿದ್ದೇನು. ಈಗ ಏನು ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಯಾವುದೇ ಕೆಲಸವನ್ನು ಮಾಡುತ್ತಿರುವುದಿಲ್ಲ. ಯಾವ ರೀತಿಯ ಕೂಲಿ ಕೆಲಸವನ್ನು ಮಾಡುತ್ತಿದ್ದೀರಿ ಎಂದರೆ ಅಮಾಲಿ ಕೆಲಸವನ್ನು ಮಾಡುತ್ತಿದ್ದೇನು. ಕೂಲಿ ಕೆಲಸವು ತಿಂಗಳಿಗೆ 15 ದಿನಗಳು ಮಾತ್ರ ಸಿಗುತ್ತಿತ್ತು . ತಿಂಗಳು ಪೂರ ಸಿಗುತ್ತಿರಲಿಲ್ಲ ಎಂದರೆ ಪ್ರತಿ ದಿನ ಸಿಗುತ್ತಿತ್ತು. ನಿಮಗೆ ಎಷ್ಟು ಸಂಬಳ ಎಂದರೆ ದಿನಕ್ಕೆ 1 ರಿಂದ 1,500/- ಕೂಲಿ ಸಿಗುತ್ತಿತ್ತು. ನೀವು ಕೂಲಿ ಕೆಲಸವನ್ನು ಮಾಡುತ್ತಿದ್ದೀರಿ ಅದರಿಂದ 1 ರಿಂದ 1,500/- ಸಾವಿರ ಕೂಲಿ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ.

ನೀವು ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಿರಿ ಎಂದರೆ ಉಡುಪಿಯ ಹೈಟೆಕ್ ಆಸ್ಪತ್ರೆ, ವಿಜಾಪೂರದ ವಾಸುದೇವ ಆಸ್ಪತ್ರೆ, ಮೀರಾತ್ ನ ಜಿ ಎಸ್ ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದೇನೆ. ಹೈಟೆಕ್ ಆಸ್ಪತೆಯಲ್ಲಿ ಪಡೆದುಕೊಂಡಿರುವ ಚಿಕಿತ್ಸೆಯನ್ನು ಹೊರತು ಪಡಿಸಿ ಬೇರೆ ಆಸ್ಪತ್ರೆಗಳಲ್ಲಿ ಪಡೆದುಕೊಂಡಿರುವ ಚಿಕಿತ್ಸೆಯು ಅಪಘಾತಗಳಿಂದ ಆದ ಗಾಯಗಳಿಗೆ ಸಂಬಂಧಿಸಿದ ಚಿಕಿತ್ಸೆಗೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಆಗಿದ್ದ ಎಲ್ಲ ಗಾಯಗಳು ವಾಸಿಯಾಗಿರುತ್ತವೆ ಎಂದರೆ ಆಗಿರುವುದಿಲ್ಲ. ನೀವು ಹಾಜರು ಮಾಡಿರುವ ವೈದ್ಯಕೀಯ ಬಿಲ್ಲುಗಳು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದಂತಹ ಬಿಲುಗಳೆಂದರೆ ಸರಿಯಲ್ಲ. ನೀವು ಹಾಜರು

ಮಾಡಿರುವ ಬಿಲ್ಲುಗಳಿಗೂ ನಿಮಗೆ ಅಪಘಾತದಲ್ಲಿ ಆಗಿದೆ ಎಂದು ಹೇಳುವ ಗಾಯಗಳಿಗೆ ತೆಗೆದುಕೊಂಡ ಚಿಕಿತ್ಸೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನೀವು ಎಲ್ಲಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತಿರಿ ಎಂದರೆ 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನೀವು 1968 ರಲ್ಲಿ ಜನಿಸಿರುತ್ತಿರಿ ಎಂದರೆ 01-06-1976 ರಲ್ಲಿ ಜನಿಸಿರುತ್ತೇನೆ. ನಿಮ್ಮ ಜನನ ದಿನಾಂಕವನ್ನು ತೋರಿಸಲು ಯಾವ ದಾಖಲೆ ಇದೆ ಎಂದರೆ ಅಂಕ ಪಟ್ಟಿ , ಆಧಾರ ಕಾರ್ಡ್ ಇರುತ್ತದೆ. ಅಂಕ ಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸ ಬಹುದು ಅಲ್ಲವೇ ಎಂದರೆ ಹೌದು. ನೀವು 1968 ರಲ್ಲಿ ಜನಿಸಿರುವುದು ಆ ಕಾರಣದಿಂದ ಅಂಕ ಪಟ್ಟಿಯನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಎಲ್ಲಾ ಚಿಕಿತ್ಸೆಯು ಮುಗಿರುತ್ತದೆ ಎಂದರೆ ಸರಿಯಲ್ಲ. ನಿಮಗೆ ಯಾವುದೇ ರೀತಿಯ ಅಂಗನ್ಯೂನತೆ ಎಂದರೆ ಸರಿಯಲ್ಲ. ಅಪಘಾತವು ನಿಮ್ಮ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳಿಂದ ನಿಮ್ಮ ಕೆಲಸಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಆಗುತ್ತದೆ. ಅಪಘಾತವು ನಿಮ್ಮ ತಪ್ಪಿ ನಿಂದಲೇ ಆಗಿರುವುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರವನ್ನು ತುಂಬಿಕೊಡಲು ಬದ್ಧರಾಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ..ಹಿ.ಸಿ.ನ್ಯಾ ಉಡುಪಿ.

ಪಿ.ಡಬ್ಲ್ಯೂ : 01